ಶ್ರೀ ಎಸ್. ನಿಜಲಿಂಗಪ್ಪ.—ಸ್ಪ್ರಿಂಗ್ಸ್ ಬಂದಿಲ್ಲ. ಬಂದಕೊಡಲೆ ಬಾಗಲ್ಕೋಟೆ ಬಿಜಾಪುರಕ್ಕೆ ಪವರ್ ಸಿಗುತ್ತೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ನಮ್ಮ ಬಿಜಾಪುರ ಜಿಲ್ಲೆಗೆ ಯಾವಾಗ ಡಿಸೇಲ್ ಪಂಪುಗಳ ಅನುಕೂಲ ಒದಗಿಸುತ್ತೀರಿ ?

ಶ್ರೀ ಎಸ್ ನಿಜಲಿಂಗಪ್ಪ.—ಅಲ್ಲಿ ನೀರಿಗೆ ಕಷ್ಟವಿದೆ ಎಂಬುದು ಗೊತ್ತಿದೆ. ಅಲ್ಲಿಗೂ ಕೊಡಲೇ ಬೇಕು. ಕೊಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ನಮ್ಮಲ್ಲಿರತಕ್ಕ ರೈತರಲ್ಲಿ ಸೇಕಡ 66 ಮಂದಿ ಚಾಲು ಗೇಣೀದಾರರು. ಅವರಿಗೆ ಭೂಮಿಯನ್ನು ಆಧಾರಕೊಡಲಿಕ್ಕೆ ಸಾಧ್ಯವಿಲ್ಲ. ಜಮೀನ್ದಾರರು ತಯಾರಿಲ್ಲ ಆದುದರಿಂದ ಆ ಡಿಸೇಲ್ ಯಂತ್ರವನ್ನೇ ಆಧಾರವಾಗಿಟ್ಟುಕೊಂಡು ಸಾಲ ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಉಪಾಯವನ್ನು ಮಾನ್ಯ ಸದಸ್ಯರೇ ಹೇಳಬೇಕು.

ಶ್ರೀ ಜಿ. ಎಸ್. ಪಾಟೀಲ್.—ಹಿಂದೆ ಈಗ ಬಗ್ಗೆ ಕೇಂದ್ರದ ಧನಸಹಾಯ ಬಹಳ ತಡವಾಗಿ ಬಂತು ಈ ಸಾರ್ತಿಯಾದರೂ ಹಾಗಾಗದಂತೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಜಾಗ್ರತೆ ಕಳುಹಿಸಬೇಕೆಂದು ನಾವಾಗಲೇ ಅವರಿಗೆ ತಿಳಿಸಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆಗಲೇ ಶ್ರೀ ಸುಬ್ಬಯ್ಯನಾಯಕರು ಹೇಳಿದಂತೆ ಪಂಪ್‌ಸೆಟ್ಟನ್ನೇ ಆಧಾರವಾಗಿಟ್ಟುಕೊಂಡು ಅವರಿಗೂ ಅದನ್ನೊದಗಿಸಲು ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಪರಿಶೀಲನೆಮಾಡರಾಗುತ್ತದೆ.

Appointment of Public Prosecutors and Government Pleaders.

*Q.—1166. Sri G. MARULAPPA (Kadur).—

Will the Government be pleased to state :

(*a*) the number of Public Prosecutors and Government Pleaders appointed this year ;

(*b*) The names of those persons appointed in each district and the community to which they belong ?

A.—Sri M. V. RAMA RAO (Minister for Law).—

(*a*) Seven Government Pleaders and two Public Prosecutors are appointed since 1-1-1963.

(*b*)—

Government Pleaders :

1. Sri C. Nagaraja Rao (Bangalore).
2. ,, S. G. Managoli (Bijapur).
3. ,, M. S. Patil (Dharwar).
4. ,, B. N. Keshava Iyengar (Tumkur).
5. ,, P. S. Kamath (North Kanara).
6. ,, T. S. Ibrahim (Coorg).
7. ,, K. Durgoji Rao (Chikmagalur).

(N. B.—Sl. Nos. 5 and 6 hold combined posts of Government Pleader and Public Prosecutor).

(SRI M. V. RAMA RAO)

Public Prosecutors:

1. Sri V. K. Balasundaram (Tumkur).
2. Sri S. N. Thirthappa (Shimoga).

Information regarding the community to which they belong is not available.

ಶ್ರೀ ಜಿ. ಮರುಳಪ್ಪ.—ಯಾವ ಕಾರಣದಿಂದ ಅವರ ಜಾತಿಗಳು ದೊರೆಯುಲಿಲ್ಲ ಎಂದ ಹೇಳಲಾಗಿದೆ

ಶ್ರೀ ಎಂ. ವಿ. ರಾಮರಾವ್.—ಈ ಪಬ್ಲಿಕ್ ಪ್ರಾಸ್‌ಕ್ಯೂಟರುಗಳನ್ನು ನೇಮಕಮಾಡುವುದರಲ್ಲಿ ಅವರು ಮಾವ ಕೋಮಿಗೆ ಸೇರಿದವರು ಎಂಬ ವಿಷಯವನ್ನು ಅವರು ಕೊಡಬೇಕಾದ್ದಿಲ್ಲ; ನಾವು ಕೇಳಬೇಕಾದ್ದೂ ಇಲ್ಲ.

ಶ್ರೀ ಜಿ. ಮರುಳಪ್ಪ.—ಈ ಅಪ್ಲಿಕೇಷನ್‌ಗಳನ್ನು ಕರೆಯತಕ್ಕವರು ಯಾರು ?

ಶ್ರೀ ಎಂ. ವಿ. ರಾಮರಾವ್.—ಡಿಸ್ಟ್ರಿಕ್ಟ್ ಜಡ್ಜಿಗಳು ಅಥವಾ ಡಿ. ಸಿ. ಗಳು.

ಶ್ರೀ ಜಿ. ಮರುಳಪ್ಪ.—ಪಬ್ಲಿಕ್ಕು ಪ್ರಾಸಿಕ್ಯೂಟರಿಗಾಗಿ ಕರೆದಿರುವ ಅರ್ಜಿಗಳನ್ನು ಈ ಸಭೆಯ ಮೇಜಿನ ಮೇಲೆ ಇಡುವುದಕ್ಕೆ ಸಾಧ್ಯವೇ ?

ಶ್ರೀ ಎಂ. ವಿ. ರಾಮರಾವ್.—ಇದು ಆಡುವುದಕ್ಕೆ ಸಾಧ್ಯವೇ ಇಲ್ಲವೇ ಎನ್ನುವುದು ಬೇರೆ ಮಾತು. ನಾನು ಆ ಇನ್‌ಫರ್‌ಮೇಷನ್ನು ಇಲ್ಲ ಎಂದು ಹೇಳಿದ ಮೇರೆ ಅದನ್ನು ಒಪ್ಪಿಕೊಳ್ಳ ಬೇಕು.

ಶ್ರೀ ಜಿ. ಮರುಳಪ್ಪ.—ಇದರಲ್ಲಿ ಹರಿಜನ ಗಿರಿಜನರು ಯಾರಾದರೂ ಅರ್ಜಿಗಳನ್ನು ಹಾಕಿರುವುದು ಬಂದಿದೆಯೇ ?

ಶ್ರೀ ಎಂ. ವಿ. ರಾಮರಾವ್.—ಹರಿಜನ ಗಿರಿಜನರು ಯಾರಿಂದಲೂ ಬಂದಿಲ್ಲ

ಶ್ರೀ ಜಿ. ಮರುಳಪ್ಪ.—ಇದಕ್ಕೆ ಹರಿಜನ ಗಿರಿಜನರು ಯಾರಾದರೂ ಅರ್ಜಿಗಳನ್ನು ಹಾಕಿದ್ದರೇ ?

ಶ್ರೀ ಎಂ. ವಿ. ರಾಮರಾವ್.—ಅರ್ಜಿಗಳನ್ನು ಯಾರೂ ಹಾಕಿರಲಿಲ್ಲ.

ಶ್ರೀ ಜಿ. ಮರುಳಪ್ಪ.—ತುಮಕೂರು ಜಿಲ್ಲೆಗೆ ವಿ. ಕೆ. ಬಾಲಸುಂದರಂ ಎನ್ನುವ ಹೆಸರು ಇದೆ. ಇವರನ್ನು ನೀವು ಬಂದ ಮೇಲೆ ಹೊಸದಾಗಿ ನೇಮಕ ಮಾಡಿದರೋ ಇಲ್ಲವೇ ಇವರು ಹಿಂದೆ ಇಲ್ಲಿ ಪಬ್ಲಿಕ್ಕು ಪ್ರಾಸಿಕ್ಯೂಟರಾಗಿದ್ದವರೋ ?

ಶ್ರೀ ಎಂ. ವಿ. ರಾಮರಾವ್.—ಅವರ ನೇಮಕ ಹೊಸದಾಗಿ ಆಗಿದೆ.

Sri S. M. KRISHNA.—Sir, is there any set procedure that the Government follows before appointing the Public Prosecutors and Government Pleaders ?

Sri M. V. RAMA RAO.—Sir, the procedure is that applications are invited from Members of the Bar by issuing a public notice to that effect which is done by the particular District Judge or by the Deputy Commissioner in the case of a Public Prosecutor and Government Pleaders. When Member of Bar have made their applications they are examined jointly or severally by the District Judge who recommends and appointments are made. Those recommendations are examined by the Government in the Law Department and a set choice is made.

ಶ್ರೀ ಕುಂದೂರು ರುದ್ರಪ್ಪ.—ಶಿವಮೊಗ್ಗದಲ್ಲಿ ಪಬ್ಲಿಕ್ಕು ಪ್ರಾಸಿಕ್ಯೂಟರಾಗಿ ನೇಮಕ ಮಾಡಲು ಇವರ ವಿಚಾರದಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು ಹಾಗೂ ಡಿಸ್ಟ್ರಿಕ್ಟು ಜಡ್ಜಿಗಳು ಸರಕಾರಕ್ಕೆ ಶಿಫಾರಸು ಮಾಡಿದ್ದರೇ ಇಲ್ಲವೇ ? ಮತ್ತು ಅಲ್ಲಿ ಇನ್ನೆಷ್ಟು ಅರ್ಜಿಗಳು ಬಂದಿದ್ದವು ?

ಶ್ರೀ ಎಂ. ವಿ. ರಾಮರಾವ್.—ಡಿಸ್ಟ್ರಿಕ್ಟು ಜಡ್ಜ್‌ರವರು ಹಾಗೂ ಡೆಪ್ಯೂಟೀ ಕಮಿಷನರವರು ಇಬ್ಬರೂ ಸೇರಿಕೊಂಡು ಶ್ರೀ ಎಸ್ ಎನ್. ತೀರ್ಥಪ್ಪನವರನ್ನು ನೇಮಕಮಾಡಲು ಶಿಫಾರಸನ್ನು ಕಳುಹಿಸಿದ್ದರು. ಅದರಂತೆ ಅವರ ನೇಮಕವನ್ನು ಮಾಡಲಾಗಿದೆ.

ಶ್ರೀ ಜಿ. ಮರುಳಪ್ಪ.—ಜಾತಿಯ ಆಧಾರದ ಮೇಲೆ ತೆಗೆದುಕೊಂಡಿದ್ದೀರಾ ಎಂದು ಕೇಳಿದು ದಕ್ಕೆ "ಇಲ್ಲ" ಎಂದು ಹೇಳಲಾಗಿದೆ. ಇನ್ನಾವ ಆಧಾರದ ಮೇಲೆ ಇವರನ್ನು ನೇಮಕ ಮಾಡಲಾಗಿದೆ.?

ಶ್ರೀ ಎಂ. ವಿ. ರಾಮರಾವ್.—ಇಲ್ಲಿ ನೇಮಕ ಮಾಡಲು ಜಾತಿಯ ಇನ್‌ಫರ್‌ಮೇಷನ್ನು ತೆಗೆದುಕೊಳ್ಳುವುದು ಅನಾವಶ್ಯಕ ಎಂದು ಇದನ್ನು ತೆಗೆದುಕೊಳ್ಳುತ್ತಿಲ್ಲ. ಇದಕ್ಕೆ ಇನ್ನಿತರ ಕಾರಣಗಳೂ ಇರುತ್ತವೆ.

ಶ್ರೀ ಎ. ಕೃಷ್ಣಶೆಟ್ಟಿ.—ಶಿವಮೊಗ್ಗದಲ್ಲಿ ಎಷ್ಟು ಜನ ಅರ್ಜಿ ಹಾಕಿದ್ದರು? ಅಥವಾ ಅರ್ಜಿ ಹಾಕದೇ ಇಲ್ಲಿ ನೇಮಕ ಮಾಡಲಾಗಿದೆಯೋ?

ಶ್ರೀ ಎಂ. ವಿ. ರಾಮರಾವ್.— ಅರ್ಜಿಯನ್ನು ಹಾಕದೇ ಶಿವಮೊಗ್ಗದಲ್ಲಿ ನೇಮಕವನ್ನು ಮಾಡಲಾಗಿದೆ.

ಶ್ರೀ ಕುಂದೂರು ರುದ್ರಪ್ಪ.—ಅರ್ಜಿ ಹಾಕದೇ ಇರತಕ್ಕ ಕ್ಯಾಂಡಿಡೇಟನ್ನು ಡೆಪ್ಯೂಟೀ ಕಮಿಷನರವರು ಹೇಗೆ ಶಿಫಾರಸು ಮಾಡಿದರು?

ಶ್ರೀ ಎಂ. ವಿ. ರಾಮರಾವ್.— ಇದನ್ನು ನೇಮಕ ಮಾಡುವವರು ಜಿಲ್ಲಾಧಿಕಾರಿಗಳಲ್ಲ. ಸರ್ಕಾರದವರು. ಸರಕಾರ ನೇಮಕ ಮಾಡುವಾಗ ಯಾರನ್ನು ನೇಮಕ ಮಾಡಿದರೆ ಪ್ರಾಸಿಕ್ಯೂಶನ್ನು ಕೇಸುಗಳು ಸುಸೂತ್ರವಾಗಿ ನಡೆಯುತ್ತವೆ ಮತ್ತು ಪ್ರಾಸಿಕ್ಯೂಷನ್ನುಗಳು ಲಕ್ಷಣವಾಗಿ ಆಗುತ್ತವೆಯೇ ಎನ್ನುವುದು ಇದರಲ್ಲರುವ ಮುಖ್ಯ ಪಾಯಿಂಟು. ಡೆಪ್ಯುಟಿ ಕಮಿಷನರು ಶಿಫಾರಸನ್ನು ಮಾಡಲೇ ಮಾಡದೇ ಇರಲಿ ಅದು ಮುಖ್ಯವಲ್ಲ. ಇಂತಹವರನ್ನು ನೇಮಕ ಮಾಡಿದರೆ ಕೆಲಸಗಳು ಚೆನ್ನಾಗಿ ನಡೆಯುತ್ತವೆಯೇ ಇಲ್ಲವೇ ಎನ್ನುವುದು ಜಿಲ್ಲಾಧಿಕಾರಿಗಳಿಗೆ ಗೊತ್ತಿರುವುದಿಲ್ಲ. ಏಕೆಂದರೆ ಈಗಿನ ಕಾಲದಲ್ಲಿ ಯಾವ ಕ್ರಿಮಿನಲ್ ಅಪೀಲನ್ನು ಜಿಲ್ಲಾಧಿಕಾರಿಗಳು ನಡೆಸುತ್ತಿಲ್ಲ. ಕ್ರಿಮಿನಲ್ ಕೇಸುಗಳನ್ನು ನಡೆಸುವುದು ಸೆಷನ್ಸು ಕೋರ್ಟುಗಳಲ್ಲೇ ಅಲ್ಲರುವ ಸೆಷನ್ಸು ಜಡ್ಜಗಳು ಡಿಸ್ಟ್ರಿಕ್ಟು ಜಡ್ಜರವರಿಗೆ ವರದಿಗಳನ್ನು ಕಳುಹಿಸುತ್ತಿರುತ್ತಾರೆ. ಅದಲ್ಲದೆ ಅಲ್ಲರುವ ಬಾರ್‌ನಲ್ಲ ಇಂತಹ ವಕೀಲರು ಚೆನ್ನಾಗಿ ಕೆಲಸ ಮಾಡುತ್ತಾರೆ ಎನ್ನುವುದು ಅಲ್ಲರುವ ವಕೀಲವ್ಯಕ್ತಿಯಿಂದ ತಿಳಿದು ಕೊಳ್ಳಬಹುದು. ಇವೆಲ್ಲವನ್ನೂ ನೋಡಿ ಆಲೋಚನೆ ಮಾಡಿಕೊಂಡು ನೇಮಕಗಳನ್ನು ಮಾಡಲಾಗುತ್ತದೆ.

ಶ್ರೀ ಜಿ. ಮರುಳಪ್ಪ.—ತಾವು ಅಧಿಕಾರಕ್ಕೆ ಬಂದ ಮೇಲೆ ಈ ದೇಶದಲ್ಲಿ ಜಾತೀಯವಾದ ಹೆಚ್ಚಾಯಿತು ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಕುಂದೂರು ರುದ್ರಪ್ಪ.—ಸಾಮ್ಯ, ನನ್ನದೊಂದು ಪಾಯಿಂಟು ಆಫ್ ಆರ್ಡರಿದೆ. ಜಾತ್ಯತೀತ ರಾಜ್ಯವಿರುವಾಗ ಜಾತೀಯವಾದ ಎಂದು ಮಾನ್ಯ ಸದಸ್ಯರು ಎತ್ತುವುದು ಸರಿಯೇ?

ಅಧ್ಯಕ್ಷರು.—ಇದರಲ್ಲ ಪಾಯಿಂಟು ಆಫ್ ಆರ್ಡರ್, ಎನೂ ಇಲ್ಲ. ಇದರ ಬಗ್ಗೆ ಸರಿಯಾದ ಸೂಚನೆ ತಾವು ನನಗೆ ಕೊಡಬೇಕು.

ಶ್ರೀ ಜಿ. ಮರುಳಪ್ಪ.—ಜಾತ್ಯಾತೀತ ರಾಷ್ಟ್ರ ಎನ್ನುವುದನ್ನು ನಾನು ಒಪ್ಪುತ್ತೇನೆ. ಇಲ್ಲ ತಾವು ನೇಮಕಗಳನ್ನು ಮಾಡಿರುವುದು ಜಾತಿಯ ಆಧಾರದ ಮೇಲೆ ಜಾಸ್ತಿಯಾಗಿ ಕೊಡರಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರು ಇಲ್ಲಿ ಜಾತೀಯ ಭಾವನೆ ಜಾಸ್ತಿಯಾಗಿದೆ ಎನ್ನುವ ಅಭಿಪ್ರಾಯವನ್ನು ಹೊಂದುವುದಕ್ಕೆ ಆಪೇಕ್ಷೆ ಇದೆ ಎಂದರೆ ಅದನ್ನು ಹೊಂದುವುದಕ್ಕೆ ಅಡ್ಡಿ ಇಲ್ಲ. ಆದರೆ ನಾನು ಜಾತೀಯ ಭಾವನೆ ಇಟ್ಟುಕೊಂಡು ಮಾಡುತ್ತಿದ್ದೇನೆ ಎಂದು ಹೇಳುವುದನ್ನು ಸಂಪೂರ್ಣವಾಗಿ ನಿರಾಕರಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶಿವಮೊಗ್ಗದಲ್ಲೆಲ್ಲಾ ಹಿಂದೆ ನೇಮಕ ಮಾಡಿದ್ದ ಪಬ್ಲಿಕ್ಕು ಪ್ರಾಸಿಕ್ಯೂಟರರ ಬಗ್ಗೆ ಹೈಕೋರ್ಟಿನಲ್ಲಿ ಕಂಟೆಂಪ್ಟ್ ಪ್ರೊಸೀಡಿಂಗ್ಸು ಆಗಿತ್ತು. For contempt of court, Sri Kalliah appeared before the High Court and he apologised. Therefore, they found that it was not worth continuing him.

Mr. SPEAKER.—Where does it come in?

Sri C. J. MUCKANNAPPA.—That is why, application was not called for. Sir, am I not entitled to put a question about which I know accurately?

Mr. SPEAKER.—If a Member knows the facts, he has no right to put a question. Questions are intended for eliciting information which a Member does not know.

Sri C. J. MUCKANNAPPA.—Is it not a fact that there was a contempt proceedings against the ex-Public Prosecutor and he was removed and this person was appointed?

Mr. SPEAKER.—It is disallowed, because answer was already given. No question of insinuation. If the Member wants any information on facts, he must ask for it.

ಶ್ರೀ ಕುಂದೂರು ರುದ್ರಪ್ಪ.—ಪಬ್ಲಿಕ್ ಪ್ರಾಸಿಕ್ಯೂಟರು ಕಲ್ಲಯ್ಯನವರನ್ನು ಎರಡು ವರ್ಷಗಳ ಕಾಲಕ್ಕೆ ಮಾತ್ರ ನೇಮಿಸಿದ್ದರು. ಅವರ ಅವಧಿ ಮುಗಿದ ಮೇಲೆ ಅರ್ಜಿಗಳನ್ನು ಕರೆದಿದ್ದು ಅರ್ಜಿಗಳನ್ನು ಹಾಕದೇ ಇರುವಂತಹವರನ್ನು ಇಲ್ಲಿ ನೇಮಕ ಮಾಡಲು ಕಾರಣಗಳೇನು ?

ಶ್ರೀ ಎಂ. ವಿ. ರಾಮರಾವ್.—ಶಿವಮೊಗ್ಗದಲ್ಲಿ ಹಿಂದೆ ಇದ್ದ ಪಬ್ಲಿಕ್ ಪ್ರಾಸಿಕ್ಯೂಟರ ಅವಧಿ ಮುಗಿಸುವುದಕ್ಕೆ ಮುಂಚಿತವಾಗಿ ವಕೀಲರುಗಳಿಂದ ಅರ್ಜಿಗಳನ್ನು ಕರೆಯಬೇಕೆಂದು ನೋಟೀಸ್ ಕೊಡರಾಗಿದ್ದಿತು. ಆ ರೀತಿಯಾಗಿ ಬಂದಅರ್ಜಿಗಳನ್ನು ಇಟ್ಟುಕೊಂಡು ಡೆಪ್ಯುಟಿ ಕಮಿಷನರವರು ಹಾಗೂ ಅಲ್ಲಿರುವ ಡಿಸ್ಟ್ರಿಕ್ಟ್ ಜಡ್ಜಿಗಳು ಕರೆತು ಅವರ ಅಭಿಪ್ರಾಯಗಳನ್ನು ಸರಕಾರಕ್ಕೆ ಕಳುಹಿಸಿದ್ದಾರೆ. ಹೀಗೆ ಕಳುಹಿಸುವುದಕ್ಕಿಂತ ಮುಂಚಿತವಾಗಿ ಹಿಂದೆ ಇದ್ದವರ ಅವಧಿ ಮುಗಿದು ಹೋಯಿತು. ತಾತ್ಕಾಲಿಕವಾಗಿ ಅಲ್ಲಿ ಹಲವು ಕೇಸುಗಳ ಪೈಕಿ ಒಂದು ಮುಖ್ಯ ಕೇಸಿನಲ್ಲಿ ಟ್ರಯಲ್ ಆಗುತ್ತಿದ್ದಾಗ ಶ್ರೀಮಾನ್ ಮುಕ್ಕಣ್ಣಪ್ಪನವರು ಈಗತಾನೇ ಹೇಳಿದ ಹಾಗೆ ಒಂದು ಕಂಟೆಂಪ್ಟ್ ಪ್ರೊಸೀಡಿಂಗ್ಸ್ ಹೈಕೋರ್ಟಿನಲ್ಲಿ ಬಂದ ಕಾರಣದಿಂದ ಇವರನ್ನು ಮುಂದುವರಿಸುವುದು ಸರಿಯಲ್ಲ ಎಂದು ಶ್ರೀ ಎಸ್. ಎನ್. ತೀರ್ಥಪ್ಪ ಎನ್ನುವವರನ್ನು ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಕ ಮಾಡರಾಯಿತು. ಡಿಸ್ಟ್ರಿಕ್ಟ್ ಜಡ್ಜರ ಹಾಗೂ ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯದಲ್ಲಿ ಈ ಪಬ್ಲಿಕ್ ಪ್ರಾಸಿಕ್ಯೂಟರನ್ನು ನೇಮಕ ಮಾಡಿರುವುದು ಉಚಿತವಾಗಿದೆ ಎಂದು ತಿಳಿಸಿದ್ದಾರೆ. ಆ ಸಲಹೆಯನ್ನು ಒಪ್ಪಿ ಈ ಪಬ್ಲಿಕ್ಕು ಪ್ರಾಸಿಕ್ಯೂಟರನ್ನೇ ಇಲ್ಲಿ ಕಂಟಿನ್ಯೂ ಮಾಡರಾಗಿದೆ.

1-30 P.M.

ಶ್ರೀ ಎಸ್. ಎಂ. ಕೃಷ್ಣ.—ನನ್ನ ಪ್ರಶ್ನೆಗೆ ಪೆಜ್ ಪ್ರೊಸೀಜರ್ ಇದೆ ಅಂತ ಹೇಳಿದಿರಿ. ಅರ್ಜಿಗಳನ್ನು ವಕೀಲರು ಹಾಕಿರಬೇಕಾಗಿತ್ತಂತಕ್ಕಂಥಾದ್ದು ಅಂತ ನಿಮ್ಮ ಮುಂದಿನ ಉತ್ತರಗಳ ಪ್ರಕಾರ ಅರ್ಜಿಗಳನ್ನು ಹಾಕದೆ ಇದ್ದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಶಿಫಾರಸು ಮಾಡಿದರೆ ಸರಕಾರ ದವರು ನೇಮಕ ಮಾಡಬಹುದು. ಅದೇ ಇವತ್ತಿನ ಸರಕಾರದ ಸ್ಥಿತಿ.

ಶ್ರೀ ಎಂ. ವಿ. ರಾಮರಾವ್.—ಸ್ಥಿತಿ ಏನೂ ಇಲ್ಲ. ಸ್ಥಿತಿ ಅನ್ನತಕ್ಕಂಥ ಪದ ಉಪಯೋಗ ಮಾಡಬೇಕಾದ ಪರಿಸ್ಥಿತಿ ಏನೂ ಇಲ್ಲ. ಅನೇಕ ಮಂದಿ ವಕೀಲರು ಅರ್ಜಿ ಹಾಕುವುದಕ್ಕೆ ಇಷ್ಟಪಡುವುದಿಲ್ಲ. ಬೆಂಗಳೂರಿನಲ್ಲಿರುವ ಅಡ್ವೋಕೇಟುರುಗಳು, ಪ್ಲೀಡರುಗಳು ಮತ್ತು ರಾ ಗ್ರಾಜುಯೇಟುಗಳಾಗಿರತಕ್ಕಂಥವರು ಎಲ್ಲಾ ಸೇರಿ ಹತ್ತಿರ ಹತ್ತಿರ ಒಂದು ಸಾವಿರಕ್ಕೆ ಬರುತ್ತಾರೆ. ಆದರೆ ಪಬ್ಲಿಕ್ ಪ್ರಾಸಿಕ್ಯೂಟರು ಮತ್ತು ಗವರ್ನ್‌ಮೆಂಟ್ ಪ್ಲೀಡರುಗಳ ಹುದ್ದೆಗೆ ಅಪ್ಲಿಕೇಶನ್ ಇನ್‌ವೈಟ್ ಮಾಡಿದರೆ ಕೇವಲ 25 ಮಂದಿ ಅಪ್ಲೈ ಮಾಡುತ್ತಿರುತ್ತಾರೆ ಬೆಳಗಾಂನಲ್ಲಿ ಪ್ರಾಯಶಃ 250 ಅಡ್ವೋಕೇಟು ಗಳಿದ್ದಾರೆ. ಅಂಥ ಒಂದು ಹುದ್ದೆಗೆ ಯಾರನ್ನಾದರೂ ನೇಮಕ ಮಾಡುವ ನಲುವಾಗಿ ಅಪ್ಲಿಕೇಶನ್ ಇನ್‌ವೈಟ್ ಮಾಡಿದರೆ, 20-25 ಮಂದಿಯೂ ಅರ್ಜಿ ಹಾಕುವುದಿಲ್ಲ 10-15 ಮಂದಿ ಹಾಕುತ್ತಾರೆ. ಅಪ್ಲಿಕೇಷನ್ನು ಹಾಕದೆ ಇದ್ದರೆ ಅವರನ್ನು ನೇಮಕ ಮಾಡಕೂಡದು ಎಂಬ ನಿಶೇಧವಿಲ್ಲ. ಯಾರಿಗೆ ಕೆಲಸ ಮಾಡುವುದಕ್ಕೆ ದಕ್ಷತೆ, ಅನುಭವವಿದ್ದು, ಅವರ ವಿಷಯದಲ್ಲಿ ಸದಭಿಪ್ರಾಯವಿದ್ದರೆ, ಅದನ್ನು ಗಮನಿಸಿ ಅವರನ್ನು ನೇಮಕ ಮಾಡಬಹುದು.

ಶ್ರೀ ಸಿದ್ಧಯ್ಯ ಶಾಸ್ತ್ರಿಮಠ್.—ರಾಯಚೂರಿನಲ್ಲಿ ನೇಮಿಸಿರುವ ಪಬ್ಲಿಕ್ ಪ್ರಾಸಿಕ್ಯೂಟರಿಗೆ ಸಂಬಳವೆಷ್ಟು ? ಗವರ್ನ್‌ಮೆಂಟ್ ಕೊಡುವ ಆನರೇರಿಯಮ್ ಎಲ್ಲರಿಗೂ ಸಮನ್ವಯ ಇನಿದೆಯೋ, ಇಲ್ಲ ಅದರಲ್ಲಿ ವ್ಯತ್ಯಾಸವಿದೆಯೋ ?

ಶ್ರೀ ಎಂ. ವಿ. ರಾಮರಾವ್.—ಕೆಲವು ಕಡೆಗಳಲ್ಲಿ ಗವರ್ನ್‌ಮೆಂಟ್ ಪ್ಲೀಡರ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳು ಕಂಬೈನ್ಡ್ ಪೋಸ್ಟ್ ಆಗಿರುತ್ತದೆ. ಇನ್ನೂ ಕೆಲವು ಕಡೆಗಳಲ್ಲಿ ಎರಡು ಪೋಸ್ಟುಗಳಿಗೂ ಬೇರೆ ಬೇರೆ ಜನ ಇರುತ್ತಾರೆ. ಆದ್ದರಿಂದ ಈ ಸಂಬಳದಲ್ಲಿ ಒಂದು ವ್ಯತ್ಯಾಸ ವಾಗುತ್ತದೆ.

Sri GANJI VEERAPPA.—While appointing public prosecutors and Government Pleaders, does the Government consider their experience and qualifications and merit, or are they swayed by communal considerations ?

(No answer)

ಶ್ರೀ ಜಿ. ಮರುಳಪ್ಪ.—ನೀವು ಬಂದ ಮೇಲೆ ಅದು ಹೆಚ್ಚಾಯಿತು.

ಶ್ರೀ ಎಂ. ವಿ. ರಾಮರಾವ್.—ನನಗೆ ಅವರು ಯಾರು ಅಂತಲೇ ಗೊತ್ತಿಲ್ಲ, ನುಮ್ಮನೆ ಹೇಳ ಬಹುದು. ಮಾತನಾಡಬೇಕು ಎಂದು ಮಾತನಾಡುತ್ತಿದ್ದಾರೆ.

ಈ ಕಮ್ಯೂನಲ್ ಕನ್ಸೀಡರೇಶನ್ಸ್ ಏನು ಅಂತ ಹೊಸದಾಗಿ ಈಗ ನಾನು ತಿಳಿದುಕೊಳ್ಳಬೇಕಾ ಗಿದೆ. ಇದಕ್ಕೆ ಜಾತಿ ಕನ್ಸೀಡರೇಶನ್ನೇ ಇಲ್ಲ ಅಂತ ಹೇಳಿದೆ. ಪ್ರಾಸಿಕ್ಯೂಟರುಗಳು ಸೆಶನ್ಸ್ ಕೋರ್ಟುಗಳಲ್ಲಿ ಪ್ರಾಸಿಕ್ಯೂಶನ್ನನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಂಡು, ನ್ಯಾಯವಾಗಿ ಕೇಸಿನಲ್ಲಿ ಕನ್‌ವಿಕ್ಷನ್ ದೊರಕಿಸಿಕೊಡಬೇಕು ; ಗವರ್ನ್‌ಮೆಂಟ್ ಪ್ಲೀಡರುಗಳು ಸಿವಿರ್ ಕೋರ್ಟುಗಳಲ್ಲಿ ಸರಕಾರಿ ಕೇಸುಗಳನ್ನು ಯಶಸ್ವಿಯಾಗಿ ನಡೆಸಬೇಕೆಂಬುದೇ ಇದರ ಮುಖ್ಯ ಉದ್ದೇಶ. ಅದಕ್ಕೆ ಯಾರನ್ನೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಶನರು ಮತ್ತು ಡಿಸ್ಟ್ರಿಕ್ಟ್ ಜಡ್ಜ್ ಶಿಫಾರಸ್ಸು ಮಾಡಿರು ತ್ತಾರೋ ಅಂಥವರನ್ನು ನೇಮಿಸುತ್ತೇವೆಯೇ ಹೊರತು ಬೇರೆ ರೀತಿಯಲ್ಲಿ ಮಾಡುತ್ತೇವೆಂದು ಹೇಳಿದರೆ ಒಪ್ಪುವುದಿಲ್ಲ. ಈ ನೇಮಕಕ್ಕೆ ನಾನಾ ಕಾರಣಗಳಿರುತ್ತವೆ. ಎಲ್ಲಾ ಜಾತಿಯ ಆಧಾರದ ಮೇಲೆ ಮಾಡುತ್ತೇವೆಂದು ಹೇಳುವ ವಾದದಲ್ಲಿ ತಿರುಳಿಲ್ಲ. ಈಗ ಶಿವಮೊಗ್ಗದ ಪಬ್ಲಿಕ್ ಪ್ರಾಸಿಕ್ಯೂಟ ರನ್ನು ನೇಮಕ ಮಾಡಿರುವುದನ್ನು ನೋಡಿದರೆ, ಅದೊಂದು ನಿದರ್ಶನವೇ ಜಾತಿಯತೆಯ ವಾದದಲ್ಲಿ ಸತ್ವವಿಲ್ಲ ಎನ್ನುವುದನ್ನು ತೋರಿಸುತ್ತದೆ.

ಶ್ರೀ ಗೋಪಾಲರಾವ್ ಮುಡ್ಕಿ.—ಬೆಂಗಳೂರಿನಲ್ಲಿ 1000 ಜನ ಅಡ್ವೋಕೇಟರುಗಳಿದ್ದರೂ 20-25 ಅರ್ಜಿಗಳು ಬರುವುದಿಲ್ಲವೆಂದು ಹೇಳಿದಿರಿ. ನೀವು ಈ ಪೋಸ್ಟುಗಳಿಗೆ 1-2 ವರ್ಷಕ್ಕೆ ನೇಮಕ ಮಾಡುವುದರಿಂದ ಜಾಸ್ತಿ ಅರ್ಜಿಗಳು ಬರುವುದಿಲ್ಲವಲ್ಲವೇ

ಶ್ರೀ ಎಂ. ವಿ. ರಾಮರಾವ್.—ಆ ರೀತಿ ಹೇಳುವುದು ಸರಿಯಿಲ್ಲ. ಒಂದೇ ಸಾರಿ ಮೂರು ವರ್ಷಕ್ಕೆ ನೇಮಕ ಮಾಡಿ ಅವರ ಕೆಲಸ ಸಮರ್ಪಕವಾಗಿಲ್ಲದಿದ್ದರೆ ಮಧ್ಯೆ ಕಾಲದಲ್ಲಿ ಅವರನ್ನು ತೆಗೆದು ಹಾಕುವುದು ಅಷ್ಟು ಸರಿಯಾಗಿ ಕಾಣುವುದಿಲ್ಲ. ಆದ್ದರಿಂದ ಸಾಮಾನ್ಯವಾಗಿ ಮೊದಲು ಒಂದು ವರ್ಷ ಎರಡು ವರ್ಷಗಳಿಗೆ ನೇಮಕ ಮಾಡಿ, ಅವರ ಕೆಲಸ ಚೆನ್ನಾಗಿ, ಸಮರ್ಪಕವಾಗಿ ನಡೆಯುತ್ತಾ ಇದ್ದರೆ, 2-3 ಟರ್ಮಿಗೆ ಮಾಡಿರತಕ್ಕಂಥ ನಿದರ್ಶನಗಳು ಜಾಸ್ತಿ ಇವೆ.

Sri S. RAJAGOPAL.—Did scheduled Caste candidates apply for the posts. If so how many applied and how many were appointed ?

ಶ್ರೀ ಎಂ. ವಿ. ರಾಮರಾವ್.—ಬಂದಿಲ್ಲ ಎಂದು ಈಗಾಗಲೇ ಹೇಳಿದೆ.

ಶ್ರೀ ಎಸ್ ಗೋಪಾಲ ಸಾಲೆನ್ನ.—ನಮ್ಮ ಘಟನೆಯಂತೆ ಷೆಡ್ಯೂಲ್ಡ್‌ಕ್ಯಾಸ್ಟುಗಳಿಗೆ 18 ಪರ್ಸೆಂಟ್ ಪೋಸ್ಟುಗಳನ್ನು ಕೊಡಬೇಕೆಂದಿದೆ. ಅದರ ಪ್ರಕಾರ ಎಷ್ಟು ರಿಜರ್ವ್ ಮಾಡಿದ್ದೀರಿ ?

ಶ್ರೀ ಎಂ. ವಿ. ರಾಮರಾವ್.—ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರಿಗೆ ಮತ್ತು ಡಿಸ್ಟ್ರಿಕ್ಟ್ ಜಡ್ಜುಗಳಿಗೆ ಲಾ ಡಿಪಾರ್ಟ್‌ಮೆಂಟಿನಿಂದ ಕಾಗದ ಬರೆಯುವ ವೇಳೆಯಲ್ಲಯೇ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿಗೆ ಸೇರಿದಂಥ ವಕೀಲರು ಯಾರಾದರೂ ಇದ್ದರೆ, ತಕ್ಕ ಅರ್ಹತೆ ಅವರಿಗೆ ಇದ್ದರೆ ಶಿಫಾರಸು ಮಾಡುವಾಗ ಅವರಿಗೆ ಪ್ರಿಫರೆನ್ಸ್ ಕೊಡಬೇಕು ಅಂತ ಸೂಚನೆ ಕೊಟ್ಟಿದ್ದೇವೆ. ಹಾಗೆ ಶಿಫಾರಸು ಮಾಡಿದ ಕೇಸುಗಳನ್ನು ಸರಕಾರ ಅತ್ಯಂತ ಆಸಕ್ತಿಯಿಂದ ಪರಿಶೀಲನೆ ಮಾಡುತ್ತಿದೆ. ಈಗ ಹೈಕೋರ್ಟು ಗವರ್ನ್‌ಮೆಂಟ್ ಪ್ಲೀಡರಾಗಿ ಒಬ್ಬರು ಇದ್ದಾರೆ.

ಶ್ರೀ ವಿ. ಎಂ. ದೇವ್.—ಗವರ್ನ್‌ಮೆಂಟ್ ಪ್ಲೀಡರನ್ನು ಎರಡು ಟರ್ಮಿಗೆ ನೇಮಕ ಮಾಡುವುದು ವಾಡಿಕೆ. ಈ ದೃಷ್ಟಿಯಿಂದ ಈ ಕೆಲಸದಲ್ಲಯೇ ಇನ್ನೊಂದು ಟರ್ಮ್ ಕೊಡುವ ಬದಲು, ತುಮಕೂರಿನ ಶ್ರೀ ಕೇಶವಯ್ಯಂಗಾರ್ ಎಂಬುವರ ಕೇಸನ್ನು ಮೂರುಸಾರಿ ರಿಜೆಕ್ಟ್ ಮಾಡಿದ್ದರೂ, ಅವರನ್ನೇ ನೇಮಕ ಮಾಡುವುದಕ್ಕೆ ಕಾರಣಗಳೇನು ?

Mr. SPEAKER.—Why drag in personalities ? The hon'ble Member is suggesting something which is objectionable. That is why mentioning of names is not generally permitted.

Sri V. M. DEO.—I have not been properly understood. The hon'ble Minister said that in the case of Tumkur one was rejected in preference to another due to some reasons.

Sri M. V. RAMA RAO.—I did not refer to anybody being rejected.

Sri V. M. DEO.—It is the convention to appoint a person for two terms. In the case of Tumkur what was the considerations that weighed with Government to make this particular appointment ?

Sri M. V. RAMA RAO.—There is no question of making any particular appointment. Applications were invited, because it was considered undesirable to extend the term of the previous incumbent.

Sri V. M. DEO.—My question is why it was rejected twice and the third time the appointment was made.

Sri M. V. RAMA RAO.—It is entirely an unfounded supposition.

ಶ್ರೀ ಎಸ್. ಎಂ. ಕೃಷ್ಣ.—ಬೆಂಗಳೂರು ಸಿಟಿ ಕೋರ್ಟ್ ಪಬ್ಲಿಕ್ ಪ್ರಾಸಿಕ್ಯೂಟರನ್ನು ಹೊಸದಾಗಿ ಇನ್ನೂ ನೇಮಕ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ರಾಮರಾವ್.—ಈ ಪಬ್ಲಿಕ್ ಪ್ರಾಸಿಕ್ಯೂಟರ ಕೆಲಸಕ್ಕೆ ಸರಿಯಾದಂಥವರನ್ನು ನೇಮಕ ಮಾಡಬೇಕೆಂಬ ಪ್ರಯತ್ನದಲ್ಲಯೇ ಇದ್ದೇವೆ. ಅಪ್ಲಿಕೇಷನ್ನುಗಳನ್ನು ಇನ್‌ವೈಟ್ ಮಾಡಿದ್ದೇವೆ ಎಂದು ಆಗಲೆ ಹೇಳಿದೆ. 24-25 ಅಪ್ಲಿಕೇಷನ್ನುಗಳು ಬಂದಿವೆ. ಬಂದಿರುವ ಅಪ್ಲಿಕೆಂಟುಗಳಿಂದ ಒಬ್ಬರನ್ನು ಆರಿಸಿಕೊಳ್ಳಬೇಕೆ ಅಥವಾ ಬೇರೆ ಇನ್ನಾರನ್ನಾದರೂ ಆ ಸ್ಥಾನಕ್ಕೆ ಆರಿಸಬೇಕೆ ಎಂದು ಪರಿಶೀಲಿಸುತ್ತಿದ್ದೇವೆ. ಸ್ವಲ್ಪ ತಡವಾಗಿದೆ. ಇನ್ನು 2-3 ದಿನಗಳಲ್ಲಿ ಆಗುತ್ತದೆ.

Sri J. P. SARVESH.—Has the Government assessed why eminent advocates refuse to apply for posts of Government Pleaders and Public Prosecutors ?

Mr. SPEAKER.—What can be done ?

Sri J. P. SARWESH.—Whether it is not a fact that every eminent able advocates in the District do not apply for these posts ?

Mr. SPEAKER.—Therefore what should be done ? I think many supplementaries have been allowed. I go to the passed over questions.

Supply of Tractors to Ryots in each District of the State.

* *Q.*—658. Sri H. R. KESHAVA MURTHY (Gandasi).—

Will the Government be pleased to state :—

(*a*) the steps taken to supply tractors to plough the lands of ryots in each District of the State ;

(*b*) the number of tractors available in each District Headquarters and the total number of acres ploughed in each District for the last 3 years ;

(*c*) the amount of arrears due from each District for such ploughing (district-war details may be given) ;

(*d*) the steps the Government intend to take, to meet the demands of the ryots for tractors ?

A.—Sri H. C. BORAIAH (Parliamentary Secretary to the Minister for Agriculture).—

(*a*) The Tractors in the Department have been distributed all over the State taking into consideration the demand and the number of machines in working condition. The District Agricultural Officers provide tractors service to the cultivators in their districts. In addition to this, tractors are being supplied to the ryots on Hire-Purchase System.